ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇ ವರ್ಷ 8ನೇ ಸಂಚಿಕೆ ಕೊಪ್ಪ 12-10-1986 ಭಾನುವಾರ ಬೆಲೆ 40 ಪೈಸೆ

ಶೃಂಗೇರಿ ಮಠಕ್ಕೂ ಹಬ್ಬಿದ ಖಲಿಸ್ತಾನ್‌ವಾದಿಗಳ ಬಾಂಬ್ ಬೆದರಿಕೆ!

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಪಂಜಾಬಿನಲ್ಲಿ ಪ್ರತ್ಯೇಕ ಖಲಿಸ್ತಾನಕ್ಕಾಗಿ ನಡೆಯುತ್ತಿರುವ ಉಗ್ರ ಹಿಂಸಾತ್ಮಕ ಚಳುವಳಿ ಶೃಂಗೇರಿಯ ಸಾಂಪ್ರದಾಯಿಕ ನವರಾತ್ರಿ ಉತ್ಸವಗಳ ಸಡಗರಕ್ಕೂ ಗ್ರಹಣ ಹಿಡಿಸಿದೆ.

ನವರಾತ್ರಿ ಉತ್ಸವ ನಡೆಯುತ್ತಿರುವ ಸಂದರ್ಭದಲ್ಲಿ ಶೃಂಗೇರಿ ಮಠಕ್ಕೆ ಬಾಂಬ್ ಹಾಕುವುದಾಗಿ ಖಲಿಸ್ತಾನ್ ಉಗ್ರಗಾಮಿಗಳು ಬೆಂಗಳೂರಿನಲ್ಲಿ ಘೋಷಣೆ ಹೊರಡಿಸಿರುವರೆನ್ನಲಾಗಿದ್ದು, ಈ ಬಗ್ಗೆ ಶೃಂಗೇರಿಯಲ್ಲಿ ಅತ್ಯಂತ ಬಿಗಿಯಾದ ಪೋಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳು ಇಲ್ಲೇ ಮೊಕ್ಕಾಂ ಮಾಡಿದ್ದಾರೆ

ಮಠದೊಳಗೆ ಬಿಗಿಯಾದ ಭದ್ರತಾ ವ್ಯೂಹ ರಚಿಸಲಾಗಿದೆ. ಗುರುಗಳಿಗೂ ಸಹ ಬಲವಾದ ರಕ್ಷಣೆ ಏರ್ಪಡಿಸಲಾಗಿದೆ. ಲೋಹಗಳನ್ನು, ಮಾರಕ ವಸ್ತುಗಳನ್ನು ಪತ್ತೆ ಹಚ್ಚುವ ಆಧುನಿಕ ಉಪಕರಣಗಳನ್ನು ಗುರುಗಳು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಮತ್ತು ಆಯಕಟ್ಟಿನ ಸ್ಥಳಗಳಲ್ಲಿ ಬಳಸಲಾಗಿರುವುದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮಠದ ಆವರಣದೊಳಗೆ ರೈಫಲ್ ಮತ್ತು ವಾಕಿ-ಟಾಕಿಗಳನ್ನು ಹಿಡಿದ ಪೋಲೀಸರು ಎಲ್ಲೆಲ್ಲೂ ತುಂಬಿದ್ದಾರೆ.

ವಾಹನಗಳಿಗೆ ನಿಷೇಧ

ಶೃಂಗೇರಿ ಪೇಟೆಯೊಳಗೆ ಯಾವುದೇ ವಾಹನಗಳನ್ನು ಬಿಡುತ್ತಿಲ್ಲ. ಕಿಗ್ಗ, ನೆಮ್ಮಾರ್ ಕಡೆಯ ವಾಹನಗಳನ್ನು ದೊಡ್ಡ ಮಿಲ್ ಬಳಿಯೂ ಉಳಿದೆಲ್ಲ ಕಡೆಗಳ ವಾಹನಗಳನ್ನು ಕಾಲೇಜು ಬಳಿಯಲ್ಲೂ ನಿಲ್ಲಿಸಲಾಗುತ್ತಿದೆ.

ಪೇಟೆಯ ಎಲ್ಲೆಡೆ ಪೋಲೀಸರು, ಹೋಂಗಾರ್ಡ್‌ಗಳು ನಿಯುಕ್ತರಾಗಿದ್ದು ಮಫ್ತಿ ಪೋಲೀಸರು, ಸಿ.ಐ.ಡಿ.ಗಳು ಗಸ್ತು ತಿರುಗುತ್ತಿದ್ದಾರೆ.

ಮಠದ ಒಳಗೆ ಹೋಗುವವರನ್ನು ಶರ್ಟು ಬಿಚ್ಚಿಸಿ, ತಪಾಸಣೆ ಮಾಡಿ ಒಳಗೆ ಬಿಡಲಾಗುತ್ತಿದೆ. ಆಯುಧಪೂಜೆ, ಪೂರ್ಣಾಹುತಿ ಇತ್ಯಾದಿ ಕಾರ್ಯಕ್ರಮಗಳಿದ್ದ ಅ. 11ರಂದು ಶರ್ಟು ಬಿಚ್ಚಲು ಒಪ್ಪದ ಎಷ್ಟೋ ಜನ ಮಠಕ್ಕೆ ಹೋಗದೆಯೇ ವಾಪಸಾದರು. ಎಲ್ಲಾ ಕಾರ್ಯಕ್ರಮಗಳನ್ನು ಇದೇ ರೀತಿ ಬಿಗಿ ಬಂದೋಬಸ್ತ್‌ನಲ್ಲಿ ನಡೆಸುವುದಾಗಿ ಪೋಲೀಸ್ ಮೂಲಗಳು ತಿಳಿಸಿದ್ದು, ಇದರಿಂದ ಸೋಮವಾರ ಜಾತ್ರೆಗೆ ಜನ ಸೇರುವುದು ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ.

ಶೃಂಗೇರಿ ಜಗದ್ಗುರುಗಳು ಭಾಷಣವೊಂದರಲ್ಲಿ ಸಿಖ್ ಭಯೋತ್ಪಾದಕರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳು ಸಿಖ್ಖರ ಕೋಪಕ್ಕೆ ಕಾರಣವಾದುವೆನ್ನಲಾಗಿದೆ. ಪೂರ್ಣ ವಿವರಗಳು ಇನ್ನೂ ಗೊತ್ತಾಗಿಲ್ಲ.

ಪಟಾಕಿ ಚೇಷ್ಟೆ!

ಹೀಗೆ ಊರಿಡೀ ಆತಂಕದ, ಕಾತರದ ವಾತಾವರಣವಿದ್ದು, ಜನರು ಅದರಲ್ಲೂ ಮುಖ್ಯವಾಗಿ ಮಠದ ಆವರಣದೊಳಗೆ ಓಡಾಡುವವರು ಸಹಜವಾಗಿಯೇ ಭಯದಲ್ಲಿರುವಾಗ ಅ. 11ರಂದು ಚಂಡಿ ಹೋಮದ ಹೋಮಕುಂಡಕ್ಕೆ ಯಾರೋ ಕಿತಾಪತಿಗಳು ರಾತ್ರಿ 7.30ರ ಹೊತ್ತಿಗೆ ಪಟಾಕಿ ಸರವೊಂದನ್ನು ಎಸೆದರು. ಪಟ ಪಟನೆ ಪಟಾಕಿಗಳು ಸಿಡಿಯತೊಡಗಿದೊಡನೆ ಜನ ದಿಕ್ಕುಪಾಲಾಗಿ ಓಡತೊಡಗಿದರೆ, ಎಲ್ಲೆಲ್ಲಿದ್ದ ಪೋಲೀಸರೆಲ್ಲ ರೈಫಲ್‌ಗಳನ್ನು ಹೊತ್ತು ಧಡಧಡನೆ ಓಡಿಬಂದರು ಪ್ರವಚನ ಮಂದಿರದಲ್ಲಿ ನಡೆಯುತ್ತಿದ್ದ ಸಂಪಗೋಡು ಸೂರ್ಯನಾರಾಯಣ ಅವರ ಸಂಗೀತ ಕಚೇರಿ ನಿಂತು ಹೋಯಿತು.

ಕೊನೆಗೆ ಅದ ಪಟಾಕಿ ಎಂದು ಗೊತ್ತಾದಾಗ ಜನ ಸ್ವಲ್ಪ ಸಮಾಧಾನಗೊಂಡರು. ಸಂಗೀತ ಕಚೇರಿ ಮುಂದುವರಿಯಿತು.

ಬಂದರೋ ಸಿಕ್ಖರು!

ಬೆಳಗ್ಗೆ 10-11 ಗಂಟೆ ಸುಮಾರಿಗೆ ಎಲ್ಲ ಕಡೆ ಕಾವಲು ದಳದವರು ತುದಿಗಾಲಲ್ಲಿ ಕಾಯುತ್ತಿದ್ದರೆ ಆಗುಂಬೆ ಕಡೆಯ ರಸ್ತೆಯಿಂದ ಅಗೋ! ಇಬ್ಬರು ಗಡ್ಡಧಾರಿ ಸಿಖ್ಖರು ಮೋಟಾರ್ ಬೈಕ್ ಮೇಲೆ ಬಂದೇ ಬಂದರು!! ಜೊತೆಯಲ್ಲಿ ಒಂದು ಬ್ರೀಫ್ ಕೇಸ್ ಬೇರೆ. ಎಲ್ಲರ ಮೈ ರೋಮಗಳು ನಿಮಿರಿ ನಿಂತವು. ಕೂಡಲೇ ಅವರನ್ನು ನಿಲ್ಲಿಸಿ, ತಪಾಸಿಸಿದಾಗ, ಅವರು ಮಣಿಪಾಲದಲ್ಲಿ ವ್ಯಾಸಂಗ ಮಾಡುತ್ತಿರುವವರಂತೆ. ಪಾಪ! ಉತ್ಸವ ನೋಡಲು ಬಂದಿದ್ದರಂತೆ. ಅಂತೂ ಅವರ ಪ್ರತಿಯೊಂದು ವಸ್ತುವನ್ನೂ ಪರೀಕ್ಷಿಸಿದ ನಂತರ ಶರ್ಟು ತೆಗೆಸಿ ಮಠಕ್ಕೆ ಬಿಡಲಾಯಿತು.

ನವೆಂಬರಿನಲ್ಲಿ ಶೃ|| ಕ್ಷೇತ್ರದ ಜನತಾ ಕಾರ್ಯಕರ್ತರ ಸಮಾವೇಶ

ಕೊಪ್ಪ: ಶೃಂಗೇರಿ ಕ್ಷೇತ್ರದ ಜನತಾ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆ ಅ.12ರಂದು ಇಲ್ಲಿ ಎಚ್. ಜಿ. ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆದು ನವೆಂಬರ್ ಮೊದಲನೆ ವಾರದಲ್ಲಿ ಕ್ಷೇತ್ರದ ಮೂರೂ ತಾಲ್ಲೂಕುಗಳ ಪಕ್ಷದ ಕಾರ್ಯಕರ್ತರ ಸಮಾವೇಶ ನಡೆಸಲು ತೀರ್ಮಾನಿಸಿ, ಕಾರ್ಯಕ್ರಮ ರೂಪಿಸಲಾಯಿತು.

ಈ ಸಮಾವೇಶದಲ್ಲಿ ಪ್ರದೇಶ ಜನತಾ ಪಕ್ಷದ ಅಧ್ಯಕ್ಷ ಎಂ. ಚಂದ್ರಶೇಖರ್, ಸಚಿವ ಅಬ್ದುಲ್ ನಜೀರ್ ಸಾಬ್, ಪ್ರಧಾನ ಕಾರ್ಯದರ್ಶಿ ಬಿ. ಎಲ್. ಶಂಕರ್, ರಾಜ್ಯ ಸಭಾ ಸದಸ್ಯರಾದ ಡಿ. ಬಿ. ಚಂದ್ರೇಗೌಡ, ರಾಜ್ಯ ಜನತಾ ಮಹಿಳಾ ಮತ್ತು ಅಲ್ಪಸಂಖ್ಯಾತರ ವಿಭಾಗಗಳ ಸಂಚಾಲಕರು, ಯುವ ಜನತಾ ಅಧ್ಯಕ್ಷರು ಮುಂತಾದ ರಾಜ್ಯ ಮಟ್ಟದ ನಾಯಕರು, ಜಿಲ್ಲೆಯ ಎಲ್ಲಾ ಶಾಸಕರು, ಇತರ ಜಿಲ್ಲಾ ಮಟ್ಟದ ನಾಯಕರುಗಳು ಹಾಗೂ ಸುಮಾರು 3000 ಜನ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆಯಿದೆಯೆಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ ಚುನಾವಣೆ ಸುದ್ದಿಗಳು

ಜಿಲ್ಲಾ ಯುವ ಕಾಂಗ್ರೆಸ್

ಚಿಕ್ಕಮಗಳೂರು ಜಿಲ್ಲೆಯ ವಿವಿಧ ತಾಲ್ಲೂಕ್ ಯುವ ಕಾಂಗ್ರೆಸ್ ಅಧ್ಯಕ್ಷರುಗಳಿಂದ ಮುಂಬರಲಿರುವ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ತೆಗೆದುಕೊಂಡ ನಂತರ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯಿಂದ ಪ್ರತಿ ಬ್ಲಾಕ್‌ಗಳಿಗೆ ವೀಕ್ಷಕರನ್ನು ನೇಮಿಸಿ ಜನಾಭಿಪ್ರಾಯವನ್ನು ಸಂಗ್ರಹಿಸಿ ಪ್ರದೇಶ ಮಟ್ಟದ ಕಾರ್ಯಾಲಯಕ್ಕೆ ಮತ್ತು ಸಂಸತ್ ಸದಸ್ಯೆ ಕು|| ಡಿ. ಕೆ. ತಾರಾದೇವಿಯವರಿಗೆ ಕಳುಹಿಸಿ ಕೊಡಲಾಗುವುದೆಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ಎಸ್. ಲಿಂಗಪ್ಪಗೌಡ ತಿಳಿಸಿದ್ದಾರೆ.

ಸಿ. ಪಿ. ಐ.

ಮುಂಬರುವ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯ್ತಿ ಚುನಾವಣೆಗಳಲ್ಲಿ ಸಿ.ಪಿ.ಐ. ಜನತಾ ಪಕ್ಷವನ್ನೊಳಗೊಂಡಂತೆ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದಿರಲು ನಿರ್ಧರಿಸಿದೆ. ಜಿಲ್ಲೆಯಲ್ಲಿ ಸ್ವತಂತ್ರವಾಗಿ 6 ಜಿಲ್ಲಾ ಪರಿಷತ್ ಸ್ಥಾನಗಳಿಗೂ ಮತ್ತು ಜಿಲ್ಲಾದ್ಯಾಂತ ಒಟ್ಟು 41 ಮಂಡಳ ಪಂಚಾಯಿತಿಗಳ 180 ಸ್ಥಾನಗಳಿಗೂ ಸ್ಪರ್ಧಿಸಲು ನಿರ್ಧರಿಸಿ ಈ ನಿಟ್ಟಿನಲ್ಲಿ ಕೂಡಲೇ ಸಿದ್ಧತಾ ಕಾರ್ಯಕ್ರಮ ಕೈಗೊಳ್ಳಲು ಕಾರ್ಯಕರ್ತರಿಗೆ ಆದೇಶಿಸಿದೆ.

ಹರಿಹರಪುರ ಜನತಾ

ಜನತಾ ಪಕ್ಷದ ಹರಿಹರಪುರ ಮಂಡಲ ಚುನಾವಣಾ ಸಮಿತಿಗೆ ಕೋಣೆಗದ್ದೆ ಪದ್ಮನಾಭ ಅಧ್ಯಕ್ಷರು, ಎಚ್.ಎಸ್. ಮಂಜುನಾಥ್ ಕಾರ್ಯದರ್ಶಿ, ಎ.ಆರ್. ಜಯಪ್ರಕಾಶ್, ಜಬ್ಬಾರ್‌ಸಾಹೇಬ್ ಉಪಾಧ್ಯಕ್ಷರು, 15 ಜನ ಕಾರ್ಯಕಾರಿ ಸಮಿತಿ ಸದಸ್ಯರು ಸೆ. 20ರಂದು ನಡೆದ ಸಭೆಯಲ್ಲಿ ಆಯ್ಕೆಯಾಗಿದ್ದಾರೆ.

ಕಲ್ಕೆರೆ ಮಂಡಲ ಬಿ. ಜೆ. ಪಿ.

ತುಳುವಿನಕೊಪ್ಪ (ಕಲ್ಕೆರೆ) ಮಂಡಲ ಬಿಜೆಪಿ ಸಮಿತಿಗೆ ವಿ. ರಾಮರಾವ್ ಅಧ್ಯಕ್ಷರು, ಕೆ. ಚಂದ್ರಶೇಖರ ಜೋಯ್ಸ್ ಪ್ರಧಾನ ಕಾರ್ಯದರ್ಶಿ. ಮಂಡಲ ಪಂಚಾಯ್ತಿಯ ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಲು ಅ. 2ರಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ವಿಠಲರಾವ್, ತಾ|| ಅಧ್ಯಕ್ಷ ಬಿ.ಎಂ. ರಘುನಾಥ್ ಭಾಗವಹಿಸಿದ್ದರು.

ಕೊಪ್ಪ ತಾ|| ಯುವ ಕಾಂಗ್ರೆಸ್

ಕೊಪ್ಪ ತಾ|| ಯುವ ಕಾಂಗ್ರೆಸ್ ಅಧ್ಯಕ್ಷ ಜಿ.ಎಸ್. ನಾಗೇಶ್ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ, ತಾವು ಇತರ ಪದಾಧಿಕಾರಿಗಳೊಂದಿಗೆ ತಾಲ್ಲೂಕಿನಾದ್ಯಂತ ಸಂಚರಿಸಿ ಯುವಕರ ಸಂಘಟನೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಎಲ್ಲ ಕಡೆ ಕಾಂಗ್ರೆಸ್ಸಿಗೆ ಯುವಕರು ಬೆಂಬಲ ಘೋಷಿಸಿದ್ದಾರೆ ಮತ್ತು ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವ ಪಣ ತೊಟ್ಟಿದ್ದಾರೆಂದು ತಿಳಿಸಿದ್ದಾರೆ.

ವೇದಿಕೆ

ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕು ಮತ್ತು ಸ್ತ್ರೀ ಸ್ವಾತಂತ್ರ್ಯ

[ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಹಕ್ಕು ದೊರಕಿಸುವ ಕಾನೂನು ಮಾಡುವುದಾಗಿ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಈಚೆಗೆ ಹೇಳಿರುವುದನ್ನು ವಿಮರ್ಶಿಸಿ, ಶೃಂಗೇರಿಯ ಹಿರಿಯ ರಾಜಕಾರಣಿ ಕೆ.ಎನ್. ವೀರಪ್ಪಗೌಡರು ನಮ್ಮ 24-8-86ರ ಸಂಚಿಕೆಯಲ್ಲಿ ಬರೆದಿದ್ದ ಅಭಿಪ್ರಾಯಗಳು ಓದುಗರಿಗೆ ನೆನಪಿರಬಹುದು. ಈ ವಿಚಾರದ ಇನ್ನೊಂದು ಮುಖವನ್ನು ಪರಿಶೀಲಿಸುವ ಒಂದು ಕಿರು ಪ್ರಯತ್ನ ಇಲ್ಲಿದೆ. ಈ ಸಮಸ್ಯೆಯ ಬಗ್ಗೆ ಆಳವಾಗಿ ಚಿಂತಿಸಿ ಓದುಗರು ವ್ಯಕ್ತಪಡಿಸುವ ಅಭಿಪ್ರಾಯಗಳಿಗೆ ಸ್ವಾಗತವಿದೆ. —ಸಂ.]

ನಮ್ಮ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹೇಳಿರುವಂತೆ, ಹೆಣ್ಣು ಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಹಕ್ಕು ನೀಡುವ ಕಾನೂನು ಬರುವುದಾದಲ್ಲಿ ಅದು ಸ್ವಾಗತಾರ್ಹ. ಸ್ವಾತಂತ್ರ್ಯ ಎಂಬ ಬೆಳಕನ್ನು ಕಾಣದೆ ಅಂಧಕಾರದಲ್ಲಿ ಮುಳುಗಿ ಒದ್ದಾಡುತ್ತಿರುವ ಎಷ್ಟೋ ಮಂದಿ ಹೆಣ್ಣು ಮಕ್ಕಳಿಗೆ ಇಂಥ ಆಸ್ತಿಯ ಹಕ್ಕು ಒಂದು ವರದಾನವಾಗುತ್ತದೆ ಎಂದರೆ ತಪ್ಪಾಗಲಾರದು.

ಸ್ವತಂತ್ರ ಬದುಕಿಗೆ ಊರುಗೋಲು

ಹಲವು ಸಂದರ್ಭಗಳಲ್ಲಿ ಸ್ತ್ರೀಯರು—ಮುಖ್ಯವಾಗಿ ವಿಧವೆಯರು, ಅವಿವಾಹಿತರು, ಗಂಡನ ದುರ್ಗುಣ, ದೌರ್ಬಲ್ಯಗಳಿಂದಾಗಿ ಬದುಕುವ ಮಾರ್ಗ ಮುಚ್ಚಿಹೋದವರು ಅಥವಾ ಆತನ ಹಿಂಸೆಯನ್ನು ತಾಳಲಾರದಾದವರು ಇತ್ಯಾದಿ—ಹಲವು ಕಾರಣಗಳಿಗಾಗಿ ಸ್ವತಂತ್ರವಾಗಿ ಬದುಕಬೇಕಾಗುತ್ತದೆ. ಹಾಗೆಯೇ ಇಂದು ಅತ್ಯಾಚಾರ, ಮಾನಭಂಗ ಮುಂತಾದುವುಗಳಿಗೊಳಗಾದವರು ಆತ್ಮಹತ್ಯೆಯನ್ನೇ 'ಆಶ್ರಯಿಸ'ಬೇಕಾಗಿದೆ. ಇದು ತಪ್ಪಿ ಅಂಥವರೂ ತಮ್ಮ ಬಾಳನ್ನು ಮುಂದುವರಿಸಲು ಅವಕಾಶವಾಗಬೇಕು. ಇಂಥ ಸಂದರ್ಭಗಳಲ್ಲೆಲ್ಲ ಇಂಥವರ ನೆರವಿಗೆ ಬರುವಂತೆ, ಇಂದಿನ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಸತ್ಯವಾದ ರೀತಿಯಲ್ಲಿ ನೋಡಿ ಅರ್ಥಮಾಡಿಕೊಂಡು ಇಂಥ ಹೊಸ ನೀತಿಯೊಂದು ರೂಪಿತಗೊಳ್ಳುವುದು ಇಂದು ಬಹಳ ಅವಶ್ಯಕವಾಗಿದೆ. ಮೇಲ್ಕಂಡ ಆಸ್ತಿ ಹಕ್ಕಿನ ಕಾನೂನು ಇಂಥದ್ದೊಂದು ಕ್ರಮವಾಗುತ್ತದೆಂದು ನಾವು ಒಪ್ಪಿಕೊಳ್ಳಬಹುದು.

ಗಂಡ-ಹೆಂಡತಿಯರಲ್ಲಿ ಸರಿಪಡಿಸಲಾರದಷ್ಟು ತೀವ್ರವಾದ ಭಿನ್ನಾಭಿಪ್ರಾಯಗಳು ಉಂಟಾದಲ್ಲಿ, ಅಥವಾ ಗಂಡನ ಹೊಡೆತ, ಹಿಂಸೆಗಳಿಂದಾಗಿ ಬದುಕೇ ದುರ್ಭರವಾದಲ್ಲಿ, ಅಂಥ ವಿಷಮ ದಾಂಪತ್ಯ ಮುಂದುವರಿಯುವುದರಲ್ಲಿ ಅರ್ಥವಿಲ್ಲ. ಹೆಣ್ಣು ಅಂಥ ಹಿಂಸೆಯಿಂದ ಹೊರಬಂದು ಬದುಕುವ ಸ್ವಾತಂತ್ರ್ಯ ಆವಳಿಗಿರಬೇಕು.

ಆರ್ಥಿಕ ಸ್ವಾತಂತ್ರ್ಯ

ಆದರೆ ಇಂದಿನ ನಮ್ಮ ಸಮಾಜದಲ್ಲಿ ಹೆಣ್ಣು ಹೀಗೆ ಗಂಡನಿಂದ ದೂರವಾದರೆ ಸಮಾಜ ಆಕೆಯನ್ನು ನಡತೆಗೆಟ್ಟವಳು, ಮಾನ-ಮರ್ಯಾದೆ ಬಿಟ್ಟವಳು ಮುಂತಾಗಿ ಚುಚ್ಚು ಮಾತುಗಳಿಂದ ಹಿಂಸಿಸುತ್ತದೆ. ಬದುಕಿಗೆ ಸರಿಯಾದ ಆಧಾರವಿಲ್ಲದ ಹೆಣ್ಣು ಸಮಾಜದ ಈ ನಿಂದನೆಗೆ ಅಂಜುತ್ತಾಳೆ. ಹೀಗೆ ಅಂಜದೆ, ಮೇಲೆ ಹೇಳಿದಂತೆ ಸ್ವತಂತ್ರವಾಗಿ ಬದುಕಬೇಕಾದರೆ ಅವಳಿಗೆ ಜೀವನಕ್ಕೊಂದು ಆಧಾರ ಬೇಕೇ ಬೇಕು. ಇದಕ್ಕಾಗಿ ಪ್ರತಿಯೊಬ್ಬ ಸ್ತ್ರೀಗೂ ವಿವಾಹಕ್ಕೆ ಮೊದಲು ಆರ್ಥಿಕ ಸ್ವಾತಂತ್ರ್ಯ ಇರಬೇಕು. ಇದು ಉದ್ಯೋಗ ಹೊಂದಿರುವ ಮೂಲಕವಾಗಲಿ ಅಥವಾ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು ಹೊಂದಿರುವ ಮೂಲಕವಾಗಲೀ ಆಗಬಹುದು.

ಅದೇ ರೀತಿ, ಹೆಣ್ಣನ್ನು ಶಾಶ್ವತವಾಗಿ ದಬ್ಬಾಳಿಕೆಗೆ, ದಾಸ್ಯಕ್ಕೆ ತಳ್ಳುವ ಕಂದಾಚಾರ, ಮೂಢನಂಬಿಕೆ, ಗೊಡ್ಡು ವಿಚಾರಗಳ ಸಂಕೋಲೆಯಿಂದ ಬಿಡಿಸಿಕೊಳ್ಳುವುದಕ್ಕೂ ಸಹ ಸ್ತ್ರೀ ಆರ್ಥಿಕ ಸ್ವಾತಂತ್ರ್ಯ ಹೊಂದಿದ್ದರೆ ಮಾತ್ರ ಸಾಧ್ಯ.

ಶೀಘ್ರ ಜಾರಿಗೆ ಒತ್ತಾಯ

ಹೆಣ್ಣು ಕೂಡ ಸ್ವಾತಂತ್ರ್ಯಕ್ಕೆ ಗಂಡಿನಷ್ಟೇ ಅರ್ಹಳು, ಆಕೆ ಯಾವ ವಿಧದಲ್ಲೂ ಗಂಡಿಗಿಂತ ಕೀಳಲ್ಲ ಎಂಬ ವಿಚಾರ ಕೆಲವೇ ಕುಟುಂಬಗಳು ಮತ್ತು ಕೆಲವೇ ಸಮಾಜಗಳಲ್ಲಿ ಮಾತ್ರ ಇದೆ. ಉಳಿದಂತೆ, ಹಳ್ಳಿಗಾಡಿನಲ್ಲೇನು—ಮುಂದುವರಿದ ಪಟ್ಟಣವಾಸಿಗಳಲ್ಲಿಸಹ ಹೆಣ್ಣೆಂದರೆ ಗಂಡಿನ ಆಳಾಗಿ ಆಜ್ಞಾನುವರ್ತಿಯಾಗಿ, ಕೀಳಾಗಿ ನಡೆಸಿಕೊಳ್ಳುವ ಪರಿಪಾಠ ಇನ್ನೂ ತಪ್ಪಿಲ್ಲ. ಇಂಥ ಹಿಂಸೆ, ಕಿರುಕುಳಗಳನ್ನೆದುರಿಸಿ, ಹೆಣ್ಣು ಮಕ್ಕಳ ಬಾಳು ಹಸನು ಮಾಡುವಲ್ಲಿ ಪ್ರತಿಯೊಬ್ಬ ಪ್ರಜ್ಞಾವಂತ ಮಹಿಳೆಯೂ ಹಳ್ಳಿ ಪ್ರದೇಶಗಳ ಹೆಣ್ಣು ಮಕ್ಕಳಿಗೆ ಮತ್ತು ಹಿಂದುಳಿದ ಸ್ತ್ರೀವರ್ಗಗಳಿಗೆ "ಹೆಣ್ಣು ಮಕ್ಕಳಿಗೂ ಆಸ್ತಿಯ ಹಕ್ಕು" ಎಂಬ ಈ ಹೊಸ ವಿಚಾರದ ಬಗ್ಗೆ ವಿವರವಾಗಿ ತಿಳಿಸಿ, ಅವರಲ್ಲಿ ಮನಃಸ್ಥೈರ್ಯ ಮೂಡಿಸಿ, ಇಂಥದೊಂದು ಕಾನೂನು ಶೀಘ್ರ ಜಾರಿಗೆ ಬರುವಂತೆ ಹೋರಾಟ ಮಾಡುವುದು ಅತ್ಯಗತ್ಯವಾಗಿದೆ.

—ಎ. ಎನ್. ವಿಶಾಲ,
ಅರಸೀತೋಟ

ಮಳೆರಾಯನಿಗೆ ....

ಏನಿದೇನಿದು ನಿನ್ನ ಕಣ್ಣು—
ಮುಚ್ಚಾಲೆಯಾಟ?
ನಿನ್ನನ್ನೇ ನಂಬಿ ಬದುಕುವ
ನಮಗಿಲ್ಲಿ ಪ್ರಾಣ ಸಂಕಟ!
ಕಲಿಸಿದವರಾರು ಹೇಳು
ನಿನಗಿಂಥ ಪಾಠ?
ಕಾಲಕಾಲಕೆ ಸುರಿಸು ಮಳೆ,
ನಿನಗ್ಯಾರ ಕಾಟ?

ಭೂಲೋಕದ ಮನುಜರಂತೆ ನೀನೂ
ಮಾಡುವೆಯಲ್ಲ ಸ್ಟ್ರೈಕು!
ನಿನ್ನನೆ ನಂಬಿ ಕುಳಿತರೆ ನಾವು, ತಟ್ಟನೆ
ಹಾಕುವೆಯಲ್ಲ ಬ್ರೇಕು!
ಲಂಚದಾಸೆಯೊ ಹೇಳು
ನಿನಗೇನು ಬೇಕು?
ವಂಚನೆಯ ಮಾಡದೆಲೆ
ಮಳೆ ಸುರಿಸು ಸಾಕು!

ಒಮ್ಮೊಮ್ಮೆ ಮನ ಬಂದಂತೆ
ವರ್ತಿಸುವೆಯಲ್ಲ,
ಬೇಕಾದಾಗ ಸುರಿಯಲು
ನಿನಗೆ ಮನಸಿಲ್ಲ;
ಒಮ್ಮೊಮ್ಮೆ ನೆರೆ ತರಿಸಿ
ಮೋಜು ನೋಡುವೆಯಲ್ಲ
ಮತ್ತೊಮ್ಮೆ ಬರ ಬರಿಸಿ
ನಸು ನಗುವಿಯಲ್ಲ!

ಇರುವನೊಬ್ಬನೆ ನಾನು ಜಗಕೆಲ್ಲ
ಎಂಬ ಜಂಬವೇ ನಿನಗೆ?
ವರುಷ ವರುಷವು ಹೀಗೆ ನೀ ಕೈಕೊಟ್ಟರೆ
ಗತಿಯಾರು ಹೇಳು ನಮಗೆ
ಇಲ್ಲಿಯವರನು ನೋಡಿ ನೀನೂ
ಕಲಿತೆಯಾ ಹೇಗೆ!?
ಎಲ್ಲಿಯವರೆಗೆ ನಿನ್ನ ಮುಷ್ಕರ
ಹೇಳು, ಕೊನೆಗೆ?
ಹಸಿರುಟ್ಟ ಭೂತಾಯ ನೋಡುವಾಸೆ
ನಿನಗಿಲ್ಲವೆ?
ಸುಟ್ಟ ಚಿತ್ತಾಲೆ ಮೈಯ ನೋಡುವುದು
ನಿನಗಿಷ್ಟವೆ?
ನಸುನಗುವ ಭೂತಾಯಿ ಬಲು
ಚಂದವಲ್ಲವೆ?
ರಸಿಕನಲ್ಲವೆ ಹೇಳು ನಿನ—
ಗಾಸೆ ಇಲ್ಲವೆ?
ಮೊಂಡು ಹಟ ನಿನಗೇಕೆ
ಬೇಗ ಮಾತಾಡು,
ಉದ್ಯೋಗವ ಕಳಕೊಳ್ಳುವೆ
ನಿನಗಿದುವೆ ಪಾಡು,
ಎಲ್ಲ ಕಡೆ ಕೃತಕ ಮಳೆ
ಸುರಿಸುವೆವು ನೋಡು!
(ಅಂಥ ವ್ಯವಸ್ಥೆಯಾಗುವವರೆಗೆ
ನಮ್ಮ ಕಾಪಾಡು!!)

—ಎಸ್. ಎಸ್. ಸೀತಾರಾಂ,
ಸತ್ತಿಕಲ್ಲು.

ಕೃಷಿ ಉತ್ಪನ್ನಗಳ ನಿಯಂತ್ರಿತ ವಹಿವಾಟು ರೈತರ ಲಾಭ, ಸೌಕರ್ಯಗಳಿಗಾಗಿಯೇ.

—ಪಟ್ಟಭದ್ರರ ಪ್ರಚೋದನೆಗೆ ಬಲಿಯಾಗದಿರಲು ರೈತರಿಗೆ ಕರೆ

ಶಿವಮೊಗ್ಗದ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿಯ ವ್ಯಾಪ್ತಿ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕುಗಳನ್ನು ಒಳಗೊಂಡಿದ್ದು, ಈ ವ್ಯಾಪ್ತಿಯಲ್ಲಿ ಅಕ್ಕಿ, ಭತ್ತ, ರಾಗಿ, ಜೋಳ, ಅಡಿಕೆ, ಮೆಣಸು, ಬೆಲ್ಲ, ಶೇಂಗಾ. ಸೀಗೆಕಾಯಿ, ಮೆಣಸಿನಕಾಯಿ, ಹುಣಸೆಹಣ್ಣು ಮತ್ತು ದ್ವಿದಳ ಧಾನ್ಯಗಳನ್ನು ನಿಯಂತ್ರಣಕ್ಕೊಳಪಡಿಸಲಾಗಿದೆ. ರೈತ ಮಾರಾಟಗಾರರ ಹಿತಾಸಕ್ತಿಗಳನ್ನು ಕಾಪಾಡುವ ಮೂಲಭೂತ ಉದ್ದೇಶ್ಯದಿಂದ ಮತ್ತು ಸ್ಪರ್ಧಾತ್ಮಕ ಬೆಲೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಿಕೊಡಲು ಈ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ನಿಯಂತ್ರಿತ ವ್ಯವಸಾಯೋತ್ಪನ್ನ ಹುಟ್ಟುವಳಿಗಳಲ್ಲಿ ವ್ಯವಹರಿಸುವ ದಲ್ಲಾಲರು, ರೈತ ಮಾರಾಟಗಾರರಿಂದ ಕಾನೂನಿಗಿಂತ ಹೆಚ್ಚು ದಲ್ಲಾಲಿ ವಸೂಲಿ, ತೂಕದಲ್ಲಿ ಮೋಸ, ಅನಧಿಕೃತ ರಿವಾಜು ವಸೂಲು ಮಾಡುವುದನ್ನು ಗಮನಿಸಿ, ಕರ್ನಾಟಕ ರಾಜ್ಯ ಸರ್ಕಾರವು ಈ ದಲ್ಲಾಲಿ ಕಮಿಷನ್‌ನ್ನು ರೈತರ ಬದಲು ಖರೀದಿದಾರರಿಂದ ಪಡೆಯುವಂತೆ ಕಾನೂನು ತಿದ್ದುಪಡಿ ಮಾಡಿ ಐತಿಹಾಸಿಕ ನಿರ್ಣಯ ಕೈಗೊಂಡಿದೆ. ಇದು ಶೋಷಿತ ರೈತ ಸಮುದಾಯಕ್ಕೆ ಮುಕ್ತಿ ತಂದುಕೊಡುವ ಸರ್ಕಾರದ ಒಂದು ಪ್ರಯತ್ನವಾಗಿದೆ. ಆದ ಕಾರಣ ಸಮಸ್ತ ರೈತರು ತಮ್ಮ ಹಕ್ಕುಗಳ ಬಗ್ಗೆ ಮನಸಂಕೆ ಮಾಡಿಕೊಂಡು ಇಂತಹ ಪ್ರೋತ್ಸಾಹಕ ಸಂಗತಿಗಳನ್ನು ಸಮಿತಿಯ ಗಮನಕ್ಕೆ ತರಬೇಕಾಗಿ ವಿನಂತಿ.

ರೈತರ ಕಲ್ಯಾಣಕ್ಕಾಗಿ ಜಾರಿಗೆ ತರಲಾದ ಈ ಕ್ರಮವನ್ನು ವಿಫಲಗೊಳಿಸಲು ಪಟ್ಟಭದ್ರ ಹಿತಾಸಕ್ತಿಗಳು ಹಲವಾರು ತಂತ್ರಗಳನ್ನು ರೂಪಿಸಿ ರೈತರನ್ನು ಸಮಿತಿಯ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳು ಕೂಡ ಸಾಗಿವೆ. ರೈತ ಬಾಂಧವರು ಈ ಸಂಗತಿಗಳನ್ನು ಮನಗಂಡು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಧೈರ್ಯದಿಂದ ಧ್ವನಿ ಎತ್ತುವ ಮೂಲಕ ಸಮಿತಿಯ ಈ ಕಾರ್ಯದಲ್ಲಿ ಸಂಪೂರ್ಣವಾಗಿ ಸಹಕರಿಸಬೇಕೆಂದು ರೈತರಲ್ಲಿ ಸಮಿತಿಯು ಕಳಕಳಿಯಿಂದ ವಿನಂತಿಸುತ್ತದೆ.

ರೈತರು ಮುಖ್ಯವಾಗಿ ಗಮನಿಸಬೇಕಾದ ಅಂಶಗಳು :

1. ನೀವು ಬೆಳೆದ ಹುಟ್ಟುವಳಿಗಳನ್ನು ಮಾರುಕಟ್ಟೆ ಯಾರ್ಡಿನಲ್ಲಿಯೇ ಮಾರಾಟ ಮಾಡಿರಿ.
2. ಸರಕನ್ನು ಮಾರಾಟ ಮಾಡುವಾಗ ಸರಿಯಾದ ತೂಕಕ್ಕೆ ಆಗ್ರಹಪಡಿಸಿರಿ.
3. ತೂಕದಲ್ಲಿ ಯಾವುದೇ ರೀತಿಯ ಕಡಿತ ಮಾಡಲು ಅವಕಾಶ ನೀಡಬೇಡಿರಿ.
4. ಬಿಳಿ ಹಾಳೆ ಮೇಲೆ ಮಾಡಿದ ಲೆಕ್ಕಾಚಾರದ ಪಟ್ಟಿಗಳನ್ನು ತಿರಸ್ಕರಿಸಿರಿ.
5. ಮುದ್ರಿತ ಮತ್ತು ಮೊಹರು ಹಾಕಿದ ಅಧಿಕೃತವಾದ ವಿಕ್ರಯ ಪಟ್ಟಿಯನ್ನು

(3ನೇ ಪುಟಕ್ಕೆ

ಓದುಗರ ಪತ್ರ

ಬೇಕು ಹರಿಹರಪುರಕ್ಕೊಂದು ಸಾರ್ವಜನಿಕ ಗ್ರಂಥಾಲಯ

ಮಾನ್ಯರೆ,

ನಮ್ಮ ಹರಿಹರಪುರ ಆರ್ಥಿಕ ರಂಗದಲ್ಲಿ ಅನ್ವೇನೂ ಮುಂದುವರಿಯದಿದ್ದರೂ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಮುಂದುವರಿಯುತ್ತಿರುವ ಗ್ರಾಮಾಂತರ ಪ್ರದೇಶವಾಗಿದೆ. (ಜನಸಂಖ್ಯೆಯೂ ಕಮ್ಮಿಯೇನಿಲ್ಲ.)

ಆದರೆ ಈ ಊರಿನ ಒಂದು ಪ್ರಮುಖ ಕೊರತೆ ಸಾರ್ವಜನಿಕ ಗ್ರಂಥಾಲಯ ಇಲ್ಲದಿರುವುದು. ಗ್ರಂಥಗಳನ್ನು ಓದುವುದು ಇರಲಿ, ವರ್ತಮಾನ ಪತ್ರಿಕೆಗಳನ್ನು ಓದಬೇಕಾದರೂ ಯಾರೋ ಪತ್ರಿಕೆ ತರಿಸುವವರ ಮನೆಗಳಿಗೆ ಅಲೆದು ಓದಬೇಕಾಗಿದೆ.

ವಿದ್ಯಾರ್ಥಿಗಳಿಂದ ಮೊದಲ್ಗೊಂಡು ಎಲ್ಲ ರೀತಿಯ ವಾಜ್ಮಯಾಸಕ್ತರಿಗೆ ಬಿಡುವಿನ ವೇಳೆಯಲ್ಲಿ ಹೆಚ್ಚಿಗೆ ಓದಿಕೊಳ್ಳಲು ಒಂದು ಗ್ರಂಥಾಲಯ ದೊರಕಿದರೆ ಊರಿನ ಶೈಕ್ಷಣಿಕ, ಸಾಂಸ್ಕೃತಿಕ ಅಭಿವೃದ್ಧಿಗೆ ಇನ್ನಷ್ಟು ಅನುಕೂಲವಾಗಲಿದೆ. ವಿದ್ಯಾರ್ಥಿಗಳಿಗಂತೂ ಬಹುದೊಡ್ಡ ಉಪಕಾರವಾಗುವುದು.

ಆದ್ದರಿಂದ ಇನ್ನಾದರೂ ಸಂಬಂಧಪಟ್ಟವರು ಇತ್ತ ಗಮನ ಹರಿಸಿ ಊರಿನ ಈ ಕೊರತೆಯನ್ನು ನೀಗಬೇಕೆಂದೂ, ಊರಿನ ಹಿರಿಯರು, ಮುಖಂಡರುಗಳೂ ಸಹ ಈ ದಿಕ್ಕಿನಲ್ಲಿ ಶ್ರಮಿಸಬೇಕೆಂದೂ ವಿನಂತಿಸುತ್ತೇನೆ.

--ಎಚ್. ಪಿ. ಚಂದ್ರಶೇಖರ, ಹೆಚ್ಚೆ, ಹರಿಹರಪುರ

ಬೆಳಗೊಳ, ಭುವನಕೋಟೆಗಳಲ್ಲಿ 2 'ಗಂಗಾ ಕಲ್ಯಾಣ' ಯೋಜನೆಗಳು

ಕೊಪ್ಪ: ಈ ತಾಲ್ಲೂಕಿನ ಎರಡು ಕಡೆ ದಲಿತರ ಬಹು ದಿನಗಳ ಅಗತ್ಯವಾಗಿದ್ದ ನೀರಾವರಿ ಸೌಲಭ್ಯ ಇದೀಗ "ಗಂಗಾ ಕಲ್ಯಾಣ" ಯೋಜನೆಯಡಿ ಪೂರೈಕೆಯಾಗುವ ಲಕ್ಷಣ ಕಂಡಿದೆ.

ಭುವನಕೋಟೆ ಗ್ರಾಮದ ಮುತ್ತೂರಿನಲ್ಲಿ ದಲಿತರ ಸುಮಾರು 30 ಎಕರೆಗೂ ಹೆಚ್ಚು ಜಮೀನಿಗೆ ನೀರು ಪೂರೈಸಲು ಎತ್ತು ನೀರಾವರಿ ಯೋಜನೆ 87-88ನೆ ಸಾಲಿನ ಮಂಜೂರಾತಿಯಲ್ಲಿ ಸೇರ್ಪಡೆಗೊಳ್ಳಲು ಎಲ್ಲಾಗಲೇ ಶಿಫಾರ್ಸಾಗಿ ಹೋಗಿದೆ. ಬೆಳಗೊಳ ಗ್ರಾಮದ 9 ಜನ ದಲಿತರ 18 ಎಕರೆ ಭೂಮಿಗೆ ನೀರೊದಗಿಸುವ ಇನ್ನೊಂದು ಯೋಜನೆಗಾಗಿ ದಾಖಲಾತಿಗಳು ಸಿದ್ಧವಾಗುತ್ತಿದ್ದು, ಇಷ್ಟರಲ್ಲೇ ಅಂತಿಮವಾಗಿ ಶಿಫಾರ್ಸಿಗೆ ಹೋಗುವ ನಿರೀಕ್ಷೆಯಿದೆ.

ಈ 18 ಎಕರೆ ಭೂಮಿ ಹಸನು ಮಾಡಲು 2 ವರ್ಷದ ಹಿಂದೆ ಕೊಪ್ಪದ ಸಿಂಡಿಕೇಟ್ ಬ್ಯಾಂಕ್ ಅವರಿಗೆಲ್ಲ ತಲಾ ಎರಡೂವರೆ ಸಾವಿರ ರೂ. ಸಾಲ ಕೊಟ್ಟಿದ್ದಲ್ಲದೆ, 5 ಜನರಿಗೆ ಒಂದೊಂದು ಜೊತೆ ಎತ್ತುಗಳಿಗಾಗಿ ಸಹ ತಲಾ 3 ಸಾವಿರ ರೂ. ಸಾಲ ಕೊಟ್ಟಿತ್ತು. ಭೂಮಿ ಹಸನು ಮಾಡಿ ತಿಂಗಳು-ಎರಡು ತಿಂಗಳಿಗೊಮ್ಮೆ ಯುಫಟೋರಿಯಂ ಕಳೆ ಸವರುವುದು ಹಾಗೂ ಎತ್ತುಗಳನ್ನು ಮೇಯಿಸಿ ಅವುಗಳಿಗೆ ಹೊಟ್ಟೆಗೆ ಹಾಕಿ ಸಾಕುವುದು-ಇಷ್ಟೇ ಕೆಲಸವಾಯಿತು ಹೊರತು ನೀರಿನ ಸೌಕರ್ಯವಿಲ್ಲದ್ದರಿಂದ ಬೇರೆ ಏನನ್ನೂ ಬೆಳೆಯಲಾಗಲಿಲ್ಲ. ಕಳೆದ ವರ್ಷ ಮಳೆಗಾಲದಲ್ಲಿ ಪ್ರಾಯೋಗಿಕವೆಂಬಂತೆ ಅಷ್ಟಿಷ್ಟು ಗದ್ದೆ ಸಾಗುವಳಿ ಮಾಡಿದ್ದರಾದರೂ ಅನಂತರ ನೀರಿಲ್ಲದೆ ಅದೆಲ್ಲ ವ್ಯರ್ಥವಾಯಿತು

ಈ ಜಮೀನಿನ ಕೆಳ ಭಾಗದಲ್ಲೇ ಸೀತಾ ನದಿ ಎಂಬ ಹೊಳೆ ಹರಿದು ಅಲ್ಲೇ ತುಂಗಾ ನದಿಗೆ ಸೇರುತ್ತಿದ್ದು, ಅಲ್ಲಿಂದ ನೀರೆತ್ತಿ, ಟ್ಯಾಂಕಿಗೊಯ್ದು ಪೂರ್ತಿ ಜಮೀನಿಗೆ ನೀರು ಹರಿಸುವುದು ಪ್ರಸಕ್ತ ಎತ್ತು ನೀರಾವರಿ ಯೋಜನೆಯ ಗುರಿಯಾಗಿದೆ. ಕಳೆದ ವರ್ಷವೇ ಸಿಂಡಿಕೇಟ್ ಬ್ಯಾಂಕ್ ಈ ಬಗ್ಗೆ ಎಸ್ಟಿಮೇಟ್ ಮಾಡಿದ್ದು, ಖರ್ಚು ತನ್ನ ಮಿತಿಗಿಂತ ಹೆಚ್ಚಾದ್ದರಿಂದ ಕೈ ಬಿಟ್ಟಿತ್ತು.

ಶೃಂಗೇರಿ ತಾ|| ಕಾವಡಿಯ ದಲಿತರಿಗೆ 4 ವರ್ಷದ ಹಿಂದೆ ಮಂಜೂರಾಗಿದ್ದ ಜಮೀನಿಗೆ ಕೂಡ ಈ ವರ್ಷ 'ಗಂಗಾ ಕಲ್ಯಾಣ' ದಲ್ಲಿ ನೀರೊದಗಿಸಲು ಶಿಫಾರ್ಸಾಗಿದೆ.

ಇದೇ ರೀತಿ ಕೊಪ್ಪ ತಾ|| ತನ್ನೂಡದಲ್ಲಿಯಲ್ಲಿ 38 ಜನ ದಲಿತರಿಗೆ ಕೊಟ್ಟಿದ್ದ 76 ಎಕರೆ ಜಮೀನು ನೀರಿನ ಸೌಕರ್ಯವಿಲ್ಲದೆ, ಅದರ ಪೈಕಿ ತಲಾ ಒಂದೊಂದು ಎಕರೆಯಲ್ಲಿ ನೆಟ್ಟಿದ್ದ ತೆಂಗಿನ ಸಸಿಗಳು ಸಾಯುತ್ತ ಹಾಳು ಬಿದ್ದಿದೆ. ಅದಕ್ಕಾಗಿ ತಾ. ಅ. ಮಂಡಳಿ ಮಂಜೂರು ಮಾಡಿದ ನೀರಾವರಿ ಯೋಜನೆ ಕಂಟ್ರಾಕ್ಟರ ದೌರ್ಜನ್ಯ, ಅಧಿಕಾರಿಗಳ ಅಲಕ್ಷ್ಯಗಳಿಂದಾಗಿ ಅರ್ಧಹುಟ್ಟಿ ಸತ್ತು ಹೋಗಿದೆ.

ಅದನ್ನು ಕೂಡ "ಗಂಗಾ ಕಲ್ಯಾಣ" ದಲ್ಲಿ ಮುಗಿಸುವಂತೆ ಜಿಲ್ಲಾಧಿಕಾರಿಗಳು ಮಾಡಿದ ಕೋರಿಕೆಯನ್ನು ಚಿಕ್ಕಮಗಳೂರಿನ ಸಣ್ಣ ನೀರಾವರಿ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು "ನೀವೇ ಪೂರ್ಣ ಮಾಡಿಸಿ, ಮೇಂಟೆನೆನ್ಸ್ ನಮಗೆ ಕೊಟ್ಟು ಬಿಡಿ" ಎಂದಿದ್ದಾರಂತೆ. ಅದನ್ನೂ ಸಹ ಇದೇ ಯೋಜನೆಯಲ್ಲಿ ಪೂರೈಸುವುದು ಎಲ್ಲ ದೃಷ್ಟಿಯಿಂದಲೂ ಯೋಗ್ಯ ಮತ್ತು ಅಗತ್ಯ.

'ಗಂಗಾ ಕಲ್ಯಾಣ' ಯೋಜನೆ ಸಾಮೂಹಿಕ ನೀರಾವರಿ ಯೋಜನೆಯಾಗಿದ್ದು, ಅದರ ಅಚ್ಚುಕಟ್ಟಿನಲ್ಲಿ ಕಡೇ ಪಕ್ಷ ಶೇ. 80ರಷ್ಟು ಭೂಮಿ ಪರಿಶಿಷ್ಟ ಜಾತಿ/ವರ್ಗದವರದಾಗಿರಬೇಕಾಗುತ್ತದೆ. ಅದರ ಪೂರ್ಣ ಖರ್ಚು ಸಣ್ಣ ನೀರಾವರಿ ಇಲಾಖೆಯೇ ಭರಿಸುತ್ತದೆ.

ಇಂಥ ಇನ್ನೂ ಯಾವುದಾದರೂ ಪ್ರದೇಶಗಳಿದ್ದಲ್ಲಿ ಅಗತ್ಯವಿರುವವರು ಕೊಪ್ಪದಲ್ಲಿರುವ ಸಣ್ಣ ನೀರಾವರಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರನ್ನು (ಶೃಂಗೇರಿ, ಕೊಪ್ಪ, ನ. ರಾ. ಪುರ-ಈ ಮೂರೂ ತಾ|| ಗಳಿಗೆ) ಸಂಪರ್ಕಿಸಬಹುದು.

ಹಳ್ಳದ ಮೋರಿಗೆ 2 ಎಮ್ಮೆಗಳ ಬಲಿ

ಹಳ್ಳಿಗಳಲ್ಲಿ ಮಳೆಗಾಲದಲ್ಲಿ ಹಳ್ಳ-ಹೊಳೆಗಳು ತುಂಬಿ ಹರಿಯುವಾಗ ಮನುಷ್ಯರು ಅವುಗಳ ಹತ್ತಿರ ಹೋಗಲು ಅಂಜಿದರೂ ಹಲ ಕೆಲವು ಪ್ರಾಣಿಗಳು ಸಲೀಸಾಗಿ ದಾಟಿ ಹೋಗುತ್ತವೆ. ಅದರಲ್ಲೂ ಎಮ್ಮೆಗಳು ಎಂಥ ನೆರೆಯಲ್ಲೂ ಈಜಿ ಬಿಡುತ್ತವೆ.

ಆದರೆ ಅವುಗಳಿಗೆ ಕೂಡ ಮೋಸ ಕೊಡುವ ಸಂದರ್ಭವೊಂದಿದೆ ಅಂಥದೊಂದು ದುರ್ಘಟನೆ ಇತ್ತೀಚೆಗೆ (ಈ ಮಳೆಗಾಲದ ಕೊನೆಯಲ್ಲಿ) ಕೊರ್ಡಿಹಿತ್ಲು-ಹೊಸೂರು ಸಮೀಪ ದೊಡ್ಡ ಹಳ್ಳದ ತಟ್ಟಿನಲ್ಲಿ ಸೇತುವೆ ಬಳಿ ನಡೆದು 2 ಎಮ್ಮೆಗಳು ಕ್ಷಣಾರ್ಧದಲ್ಲಿ ಅಸು ನೀಗಿದ ದುರಂತ ಸಂಭವಿಸಿತು.

ಕಳೆದ ಆಗಸ್ಟ್ 25ರಂದು ಒಬ್ಬ ಹುಡುಗ 2 ಎಮ್ಮೆಗಳನ್ನು ಹೊಡೆದುಕೊಂಡು ಹೋಗುತ್ತಿದ್ದನು, ಬಿಸಿಲಿದ್ದುದರಿಂದ ಸೇತುವೆ ಬಳಿ ಅವನ್ನು ನೀರಿಗಿಳಿಸಿದ. ಸೇತುವೆಗೆ ಮೂರೂವರೆ ಅಡಿ ಎತ್ತರದ ಕೊಳವೆಗಳನ್ನು ಹಾಕಿದ್ದು, ಸಾಕಷ್ಟು ತುಂಬಿ ಹರಿಯುತ್ತಿದ್ದ ನೀರು ಈ ಪೈಪಿನೊಳಗೆ ಎಷ್ಟು ರಭಸದಿಂದ ನುಗ್ಗುತ್ತಿದೆಯೆನ್ನುವುದು ಯಾರಿಗೂ ಅಷ್ಟಾಗಿ ಅಂದಾಜಿರಲಿಲ್ಲ. ಆ ರಭಸ ಈ ಎರಡೂ ಎಮ್ಮೆಗಳನ್ನು ಒಟ್ಟಿಗೆ ರಪ್ಪನೆ ಪೈಪಿನೊಳಗೆ ಸೆಳೆದುಕೊಂಡಾಗಲೇ ಇದು ಅರಿವಾದದ್ದು. ಸುತ್ತಮುತ್ತಲ ಜನ ಸೇರಿ ಅವನ್ನು ಹೊರಕ್ಕೆಳೆಯುವುದರೊಳಗೆ ಅವುಗಳ ಪ್ರಾಣಪಕ್ಷಿ ಹಾರಿಹೋಗಿತ್ತು; ಕ್ಷಣಾರ್ಧದಲ್ಲಿ ಸುಮಾರು 4 ಸಾವಿರ ರೂ ಪಾಯಿ ಹೊಳೆಯ ಪಾಲಾಗಿತ್ತು.

ನಮ್ಮ ಹಳ್ಳಿಗಳಲ್ಲಿ ಈಚೆಗೆ ಇಂಥ ಸೇತುವೆಗಳು ಎಲ್ಲೆಲ್ಲೂ ಕಾಣಬರುತ್ತವೆ. ಇಂಥದೊಂದು ಗಂಡಾಂತರ ಅವುಗಳಲ್ಲಿ ಕಾದಿರುತ್ತದೆ ಎಂಬುದು ಈವರೆಗೆ ಅಷ್ಟಾಗಿ ಗೊತ್ತಿರದ ಸಂಗತಿಯಾದ್ದರಿಂದ ಈ ಮೇಲಿನ ದುರಂತದ 'ನೀತಿ' ಎಲ್ಲರಿಗೂ ಎಚ್ಚರಿಕೆಯಾಗಲಿ ಎಂದು ಈ ವರದಿಯ ಆಶಯ.

(ವರದಿ: ಹೊಸೂರು ಸೂರಪ್ಪ ನಾಯ್ಕ)

ಜೇನು ಕೃಷಿ ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪ: 1986-87ನೇ ಸಾಲಿನಲ್ಲಿ ವಾರ್ಷಿಕಾಭಿವೃದ್ಧಿ ಯೋಜನೆಯಲ್ಲಿ 2 ತಿಂಗಳ ಕಾಲ ಕೊಪ್ಪದ ಜೇನು ಸಾಕಾಣಿಕಾ ಕೇಂದ್ರದಲ್ಲಿ ಜೇನು ಕೃಷಿ ತರಬೇತಿಯು ದಿನಾಂಕ 15.10.86ರಿಂದ ಪ್ರಾರಂಭವಾಗುತ್ತದೆ. ತರಬೇತಿ ಪಡೆಯಲಿಚ್ಛಿಸುವ 18ರಿಂದ 35 ವರ್ಷದೊಳಗಿನ ಮಹಿಳೆಯರು ಮತ್ತು ಪುರುಷರು ಜೇನು ಕೃಷಿ ಪ್ರದರ್ಶಕರನ್ನು ಜೇನು ಸಾಕಾಣಿಕಾ ಕೇಂದ್ರದ ಕಛೇರಿಯ ವೇಳೆಯಲ್ಲಿ ಭೇಟಿ ಮಾಡಿ ಅರ್ಜಿ ಸಲ್ಲಿಸಬಹುದು.

ತಾ|| ಅಂಗನವಾಡಿ ಕಾರ್ಯಕರ್ತೆಯರ ಸಮ್ಮೇಳನ : ವೇತನ ನೀಡಿಕೆ ಮತ್ತು ಖಾಯಂಗೆ ಆಗ್ರಹ

ಕೊಪ್ಪ: ಅಂಗನವಾಡಿ ಕಾರ್ಯಕರ್ತೆಯರ ಸಂಘದ ತಾ|| ಮಟ್ಟದ 2ನೇ ವರ್ಷದ ಸಮ್ಮೇಳನ ಈಚೆಗೆ ಇಲ್ಲಿ ನಡೆಯಿತು.

ಐದು ವರ್ಷಕ್ಕೆ ತಾತ್ಕಾಲಿಕವೆಂದು ಆರಂಭವಾಗಿದ್ದ ಅಂಗನವಾಡಿ ಯೋಜನೆಯ ಅವಧಿಯನ್ನು 10 ವರ್ಷಕ್ಕೆ ಮುಂದುವರಿಸಲಾಗಿದೆ. ಆದರೆ ಈ ಯೋಜನೆ ಹಮ್ಮಿಕೊಂಡಿರುವ ಮಹಿಳಾ ಮತ್ತು ಶಿಶು ಕಲ್ಯಾಣದ ಕಾರ್ಯಕ್ರಮ ಸಾರ್ವಕಾಲಿಕವಾದುದಾದ್ದರಿಂದ ಈ ಯೋಜನೆಯನ್ನೂ ಅದರ ಉದ್ಯೋಗಿಗಳನ್ನೂ ಖಾಯಂಗೊಳಿಸಬೇಕು; ಶಿಕ್ಷಣಪೂರ್ವ ಶಾಲೆ (ನರ್ಸರಿ)ಯನ್ನು ಕಡ್ಡಾಯಗೊಳಿಸಬೇಕು; ಅಂ|| ಕಾರ್ಯಕರ್ತೆಯರಿಗೆ ಗೌರವ ಧನದ ಬದಲು ವೇತನವನ್ನು ನೀಡಬೇಕು-ಸುಪ್ರೀಂ ಕೋರ್ಟಿನ "ಸಮಾನ ಕೆಲಸಕ್ಕೆ ಸಮಾನ ವೇತನ" ಆಜ್ಞೆಯಂತೆ ಶಿಕ್ಷಕಿಯರಿಗೆ 750 ರೂ. ಗಳನ್ನು ಸಹಾಯಕಿಯರಿಗೆ 700 ರೂ. ಗಳನ್ನು ನೀಡಬೇಕು-ಎಂದು ಸರ್ಕಾರವನ್ನು ಒತ್ತಾಯಿಸಲಾಯಿತು.

ಅಲ್ಲದೆ ಸ್ಥಳೀಯವಾಗಿ, ಆಹಾರ ಸಾಮಗ್ರಿ, ಲೆಕ್ಕದ ಪುಸ್ತಕಗಳು, ಆಹಾರ ಬೇಯಿಸಲು ಸೌದೆ-ಇವುಗಳ ಪೂರೈಕೆ ಸಲ್ಲಿಯಾಗಿ ಎಂಬ ದೂರಿನ ಬಗ್ಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಾಲವಿಕಾಸಯೋಜನಾಧಿಕಾರಿ (ಇನ್ ಚಾರ್ಜ್) ಸತ್ಯನಾರಾಯಣ ಅವರು ಇವುಗಳ ಪೂರೈಕೆಯನ್ನು ಕೂಡಲೇ ಸರಿ ಪಡಿಸುವ ಭರವಸೆ ಕೊಟ್ಟರು.

ಸಂಘದ ನೂತನ ಸಾಲಿನ ಪದಾಧಿಕಾರಿಗಳು: ಎಚ್. ಸಿ. ಪ್ರೇಮಾ (ಅಧ್ಯಕ್ಷೆ), ಸರಸ್ವತಿ, ಬಿ. ವಿ. ಗಾಯಿತ್ರಿ (ಉಪಾಧ್ಯಕ್ಷರು), ಎನ್. ಆರ್ ರಾಮಚಂದ್ರ (ಪ್ರಧಾನ ಕಾರ್ಯದರ್ಶಿ), ಭಾನುಮತಿ (ಸಹ ಕಾರ್ಯದರ್ಶಿ), ನಾಗರಪ್ನ (ಖಜಾಂಚಿ) ಮತ್ತು 15 ಜನ ಕಾರ್ಯಕಾರಿ ಸಮಿತಿ ಸದಸ್ಯೆಯರು.

ಕೃಷಿ ಉತ್ಪನ್ನಗಳ ನಿಯಂತ್ರಿತ ವಹಿವಾಟು

(ಎರಡನೇ ಪುಟದಿಂದ)

ಕೊಡುವಂತೆ ಒತ್ತಾಯ ಪಡಿಸಿರಿ.

6. ಬಿಳಿ ಚೀಟಿಯಲ್ಲಿ ದಲ್ಲಾಲಿಯನ್ನು ನಮೂದಿಸಿ ಕೊಟ್ಟರೆ ಆ ಬಿಳಿ ಚೀಟಿಯೊಂದಿಗೆ ಹಣ ಪಾವತಿ ಪಡೆಯುವ ಮುನ್ನ ಸಮಿತಿಯ ಅಧಿಕಾರಿಗಳನ್ನು ಸಂಪರ್ಕಿಸಿರಿ.

7. ಅಧಿಕೃತ ಬಿಲ್ ನೀಡಿ ಕಮಿಷನ್ ನಮೂದಿಸಿದ್ದರೆ, ದಾಖಲಾತಿಗಳೊಂದಿಗೆ ಸಮಿತಿಗೆ ದೂರು ನೀಡಿರಿ.

8. ಸಮಿತಿಯ ಬೈಲಾದಲ್ಲಿ ನಿಗದಿ ಪಡಿಸಿದ ಹಮಾಲಿ ಹೊರತುಪಡಿಸಿ, ಯಾವುದೇ ರೀತಿಯ ಸಾದಿಲ್ವಾರು, ಸರ್ವೀಸ್ ಛಾರ್ಜ್, ಇನ್ಸೂರೆನ್ಸ್ ಇವೇ ಮುಂತಾದ ಅನಧಿಕೃತ ರಿವಾಜುಗಳನ್ನು ನೀಡಬೇಡಿ. ಈ ಮೇಲ್ಕಂಡ ರಿವಾಜುಗಳ ವಸೂಲಿ ಕಾನೂನು ಬಾಹಿರವೆಂದು ನ್ಯಾಯಾಲಯ ತೀರ್ಪು ನೀಡಿದೆ.

9. ಸ್ಯಾಂಪಲ್ ಎಂದಾಗಲೀ, ಧೂಳು ಎಂದಾಗಲೀ ನಿಮ್ಮ ಸರಕಿನ ಪರಿಮಾಣದಲ್ಲಿ ಕಡಿತ ಮಾಡಲು ಅವಕಾಶ ನೀಡಬೇಡಿರಿ.

10. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಅಥವಾ ಕುಂದು ಕೊರತೆಗಳಿದ್ದಲ್ಲಿ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರನ್ನು ಸಂಪರ್ಕಿಸಿರಿ.

— ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ

ಕೊಪ್ಪ, ಗಡಿಕಲ್‌ಗಳಲ್ಲಿ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರ

ಕೊಪ್ಪ : ಇಲ್ಲಿನ ರೋಟರಿ ಕ್ಲಬ್, ಆರೋಗ್ಯ ಇಲಾಖೆ, ಗಡಿಕಲ್ ಆಂಜನೇಯ ಯುವಕ ಸಂಘ ಹಾಗೂ ಹಿರೇಕೊಡಿಗೆ ಮತ್ತು ಬೊಮ್ಮಲಾಪುರ ಪಂಚಾಯಿತ್–ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಿರೇಕೊಡಿಗೆಯ ಪ್ರೌಢಶಾಲೆ ಆವರಣದಲ್ಲಿ 15.10.86ನೇ ಬುಧವಾರ ಉದರದರ್ಶಕ ಸಂತಾನಹರಣ ಶಸ್ತ್ರ ಚಿಕಿತ್ಸಾ ಶಿಬಿರ ಏರ್ಪಾಡಾಗಿದೆ.

ಸರ್ಕಾರದ ನಗದುಹಣ, ಲಾಟರಿಟಿಕೆಟ್‌ಗಳಲ್ಲದೆ, ಶಾಸಕ ವಹಿಸಿ ಮತ್ತು ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಹಲವು ಬಗೆಯ ವಸ್ತುರೂಪದ ಕೊಡುಗೆಗಳು ಚಿಕಿತ್ಸೆಗೊಳಗಾದ ಪ್ರತಿಯೊಬ್ಬರಿಗೂ ದೊರೆಯುವುವಲ್ಲದೆ ಉಚಿತ ಊಟದ ವ್ಯವಸ್ಥೆ ಸಹ ಮಾಡಲಾಗಿದೆ.

ಅದೇ ದಿನ ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆ ಏರ್ಪಡಿಸಿದ್ದು, ಊಟದ ಹೊರತು ಮೇಲ್ಕಂಡ ಮತ್ತೆಲ್ಲಾ ಕೊಡುಗೆ–ಸೌಕರ್ಯಗಳೂ ದೊರೆಯುತ್ತವೆ.

ಕಾಫಿ ಮಂಡಳಿಯ 1985ರ ಸಬ್ಸಿಡಿಗೆ ಅರ್ಜಿ ಆಹ್ವಾನ

1985ನೇ ಸಾಲಿನಲ್ಲಿ ಹೊಸದಾಗಿ ಕಾಫಿ ಹಾಕಿದ ತೋಟಗಳಿಗೆ ಕಾಫಿ ಮಂಡಳಿಯು ಎಕರೆಗೆ 1000 ರೂ. ಸಹಾಯಧನ ನೀಡಲಿದ್ದು ಇದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1983ನೇ ಸಾಲಿನಲ್ಲಿ ಹೊಸದಾಗಿ ಕಾಫಿ ಹಾಕಿದ ತೋಟಗಳಿಗೆ ಮಂಜೂರಾದ ಸಹಾಯಧನದ ಬಾಬ್ತು ಎರಡನೇ ಕಂತಿಗೂ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ನಮೂನೆಗಳು ಆಯಾ ಪ್ರದೇಶದ ಸಂಪರ್ಕಾಧಿಕಾರಿ ಕಛೇರಿಯಲ್ಲಿ ದೊರೆಯಲಿದ್ದು, ಸೂಕ್ತ ದಾಖಲೆಗಳೊಂದಿಗೆ ಅರ್ಜಿಗಳನ್ನು ಆಯಾ ಕಛೇರಿಗೆ 31.3.1987ರ ಒಳಗಾಗಿ ಸಲ್ಲಿಸಬೇಕು. ಅನಂತರ ಸಲ್ಲಿಸಿದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಕಾಫಿ ಮಂಡಳಿಯ ಪ್ರಕಟಣೆ ತಿಳಿಸಿದೆ.

ನ.ರಾ. ಪುರ, ಬಾಳೆಹೊನ್ನೂರುಗಳಲ್ಲಿ ರೈಫಲ್ ಶೂಟಿಂಗ್ ತರಬೇತಿ

ನರಸಿಂಹರಾಜಪುರ: ಇಲ್ಲಿ ಮತ್ತು ಬಾಳೆಹೊನ್ನೂರಿನಲ್ಲಿ ನಾಗರಿಕರಿಗೆ ರೈಫಲ್ ಶೂಟಿಂಗ್ ತರಬೇತಿಯನ್ನು ನೀಡಲು ಯೋಚಿಸಲಾಗಿದ್ದು, ತರಬೇತಿ ಶಿಬಿರಗಳು ನಡೆಯುವ ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದು. ತರಬೇತಿ ಪಡೆಯಲಿಚ್ಛಿಸುವ ಸ್ತ್ರೀ–ಪುರುಷರು ಆಯಾ ಊರಿನ ಪೋಲೀಸ್ ಠಾಣೆಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಪ್ರಿನ್ಸಿಪಾಲರ, ಮುಖ್ಯ ಶಿಕ್ಷಕರ ಸಮಾವೇಶ

ಬೆಂಗಳೂರು : ಸಮೀಪದ ಜನಸೇವಾ ವಿದ್ಯಾಕೇಂದ್ರದಲ್ಲಿ ಪ್ರಿನ್ಸಿಪಾಲರು ಮತ್ತು ಮುಖ್ಯ ಶಿಕ್ಷಕರ ಅಖಿಲ ಭಾರತ ಸಮ್ಮೇಳನವು ಬೆಂಗಳೂರಿನ ಶಿಕ್ಷಣ ವಿಕಾಸ ಪರಿಷತ್ ಮತ್ತು ನವದೆಹಲಿಯ ವಿದ್ಯಾಭಾರತಿ ಸಂಸ್ಥೆಗಳ ಆಶ್ರಯದಲ್ಲಿ ಅಕ್ಟೋಬರ್ 26ರಿಂದ 28ರ ತನಕ ನಡೆಯಲಿದೆ. ಪೂರ್ವ ಪ್ರಾಥಮಿಕ ವಿಭಾಗದಿಂದ ಕಿರಿಯ ಕಾಲೇಜು ಮಟ್ಟದವರೆಗಿನ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಬಹುದಾದ ಈ ಸಮ್ಮೇಳನದಲ್ಲಿ ನಾಡಿನ ಖ್ಯಾತ ಶಿಕ್ಷಣತಜ್ಞರು, ಸಾಹಿತಿ ಕಲಾವಿದರು ಪಾಲ್ಗೊಳ್ಳಲಿದ್ದಾರೆ. ಅನೇಕ ಶಿಕ್ಷಣ ವಿಷಯಗಳ ಬಗ್ಗೆ ಚರ್ಚೆ–ಗೋಷ್ಠಿಗಳಲ್ಲದೆ ವಿವಿಧ ರಾಜ್ಯಗಳಲ್ಲಿನ ಬೋಧನಾ ಕ್ರಮ, ಶೈಕ್ಷಣಿಕ ಪ್ರಯೋಗಗಳು, ಯೋಗ ಸಂಗೀತ, ಶಾರೀರಿಕ ಅಭ್ಯಾಸ, ಸಂಸ್ಕೃತ ಇತ್ಯಾದಿ ವಿಷಯಗಳ ಬಗ್ಗೆ ಸಹಚಿಂತನೆ, ಮಕ್ಕಳ ಸೃಜನಶೀಲತೆ, ಸಂಸ್ಕಾರಗಳಿಗೆ ಸಂಬಂಧಿಸಿದ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ.

ಕರ್ನಾಟಕ ರಾಜ್ಯದ ಮುಖ್ಯಶಿಕ್ಷಕರೇ ಅಲ್ಲದೆ ಶಾಲಾ ಆಡಳಿತಮಂಡಳಿ ಅಧ್ಯಕ್ಷ/ಕಾರ್ಯದರ್ಶಿಗಳೂ, ಭಾಗವಹಿಸಬಹುದಾದ ಈ ಶೈಕ್ಷಣಿಕ ಸಮ್ಮೇಳನದ ಶುಲ್ಕ ರೂ. 50 ಮಾತ್ರ. ಆಸಕ್ತರು ಹೆಚ್ಚಿನ ವಿವರಗಳನ್ನು ಶ್ರೀ ಯು. ಭೀಮರಾವ್, ಕೇಶವ ಶಿಲ್ಪ, ಕೆಂಪೇಗೌಡ ನಗರ, ಬೆಂಗಳೂರು – 560019 ಇವರಿಂದ ಪಡೆಯಬಹುದೆಂದು ಶಿಕ್ಷಣ ವಿಕಾಸ ಪರಿಷತ್ ಪ್ರಕಟಣೆ ತಿಳಿಸಿದೆ.

ಯುವಕ ಸಂಘದ ಶ್ರಮದಾನ

ಕೊಪ್ಪ: ಇಲ್ಲಿನ ಬಾಳೆಗದ್ದೆಯ ಸರ್ವೋದಯ ಯುವಕ ಸಂಘದ ಆಶ್ರಯದಲ್ಲಿ ಗಾಂಧಿ ಜಯಂತಿಯ ಅಂಗವಾಗಿ 3 ದಿನಗಳ ಕಾಲ ಶ್ರಮದಾನ ನಡೆಯಿತು. ರಾಷ್ಟ್ರೀಯ ಹೆದ್ದಾರಿ "ರಾಜ್ಯ ರಸ್ತೆ" ಎಂದು ಈಚೆಗೆ ಹೆಸರಿಟ್ಟಿರುವ ಬಾಳೆಗದ್ದೆ ಕಾಚಕಲ್ ರಸ್ತೆಯ ಜಲ್ಲಿಯೆಲ್ಲ ಎದ್ದುಹೋಗಿ ಪಾದಚಾರಿಗಳು ತಿರುಗಾಡುವುದು ಸಹ ಕಷ್ಟವಾಗಿದ್ದು, ಅದನ್ನು ಮಣ್ಣು ಹಾಕಿ ದುರಸ್ತಿಗೊಳಿಸಲಾಯಿತು. ಸಂಘದ ಸದಸ್ಯರು ಮಾತ್ರವಲ್ಲದೆ ಸುತ್ತಮುತ್ತಲ ನಾಗರಿಕರು ಮತ್ತು ರೈತರು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಒಂದು ಟಿಲ್ಲರ್ ಮತ್ತು ಒಂದು ಗಾಡಿಯನ್ನು ನೀಡಿದ್ದರು.

ಈ ಕಾರ್ಯಕ್ರಮವನ್ನು ಅ. 1ರ ಸಂಜೆ ಸಬ್ ಇನ್‌ಸ್ಪೆಕ್ಟರ್ ದುರ್ಗಯ್ಯನವರ ಅಧ್ಯಕ್ಷತೆಯಲ್ಲಿ ತಹಸೀಲ್ದಾರ್ ಆರ್. ಶ್ರೀನಿವಾಸ್ ಉದ್ಘಾಟಿಸಿದರು. ಸಿರಿಮನೆ ನಾಗರಾಜ್ ಮತ್ತು ಕೆ. ಎಸ್. ರಾಮಣ್ಣ ಮುಖ್ಯ ಅತಿಥಿಗಳಾಗಿದ್ದರು.

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 11.10.1986

ಸರಕು: 2700 – 3480
ಬೆಟ್ಟೆ : 1707 – 2209
ಗೊರಬಲು: 775 – 1200

ಶೃಂಗೇರಿ : 35 ಜನರಿಗೆ ಕುಟುಂಬ ಯೋಜನೆ ಚಿಕಿತ್ಸೆ

ಶೃಂಗೇರಿ: ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಈಚೆಗೆ ನಡೆದ ಸಾಮೂಹಿಕ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ ಶಿಬಿರದಲ್ಲಿ 35 ಜನರಿಗೆ ಶಸ್ತ್ರಕ್ರಿಯೆ ನಡೆಸಲಾಯಿತು. ಡಾ॥ ಅನಂತ ಪದ್ಮನಾಭ ಅವರು ಉದರದರ್ಶಕ ಶಸ್ತ್ರ ಕ್ರಿಯೆಯನ್ನೂ ಡಾ॥ ದೇವಿಕಾಲಕ್ಷ್ಮಿಯವರು ಟ್ಯುಬೆಕ್ಟಮಿಯನ್ನು ನಡೆಸಿದರು.

ಶಸ್ತ್ರಚಿಕಿತ್ಸೆಗೊಳಗಾದ ಪರಿಶಿಷ್ಟ ಜಾತಿ/ವರ್ಗಗಳವರಿಗೆ ತಾ॥ ಅ. ಮಂಡಳಿಯಿಂದ ಒಂದೊಂದು ಸೀರೆ ಕೊಡಲಾಯಿತು. ಉಳಿದೆಲ್ಲಾ ಶಿಬಿರಾರ್ಥಿಗಳಿಗೆ ವಲಯ ಅರಣ್ಯಾಧಿಕಾರಿ ಸೈಯದ್ ಗಫಾರ್ ಅವರು ಸ್ವಂತವಾಗಿ ಒಂದೊಂದು ಸೀರೆ ನೀಡಿದರು.

ಕೊಪ್ಪದಲ್ಲಿ ಪಾಮ್ ಎಣ್ಣೆ ಪೂರೈಕೆ ಬಗ್ಗೆ

ಕೊಪ್ಪ: ಇಲ್ಲಿನ ಪಡಿತರ ಕಾರ್ಡ್‌ದಾರರಿಗೆ ಪಾಮ್ ಎಣ್ಣೆ ಸರಿಯಾಗಿ ಪೂರೈಕೆಯಾಗುತ್ತಿಲ್ಲ–ಎಂಬ ನಾಗರಿಕರ ದೂರಿನ ಬಗ್ಗೆ ತಹಸೀಲ್ದಾರರನ್ನು ವಿಚಾರಿಸಿದಾಗ, ಒಟ್ಟು ಪೂರೈಕೆಯೇ ಸಾಕಷ್ಟಿಲ್ಲದಿರುವುದು ತಿಳಿದುಬಂತು.

ತಾಲ್ಲೂಕಿಗೆ ಪೂರೈಕೆಯಾಗುತ್ತಿರುವ ಒಟ್ಟು ಎಣ್ಣೆಯ ಪ್ರಮಾಣವೇ ಬಹಳ ಕಡಿಮೆಯಿದ್ದು ಅದನ್ನು ತಲಾವಾರು ಪ್ರಮಾಣದಲ್ಲಿ ಇಡೀ ತಾಲ್ಲೂಕಿಗೆ ಹಂಚಲಾಗುತ್ತಿದೆ; ಕಡೇ ಪಕ್ಷ ಕಾರ್ಡಿಗೆ ಒಂದು ಕಿಲೋ ದಷ್ಟಾದರೂ ಒದಗಿಸುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಆದರೆ ಜಿಲ್ಲೆಯ ಪೂರೈಕೆ ಸಹ ಇದೇ ಪ್ರಮಾಣದಲ್ಲಿ ಇದ್ದಿರಬೇಕಾಗಿದ್ದು, ಸದ್ಯಕ್ಕೆ ಹೆಚ್ಚಿನ ಆಶಾವಾದಕ್ಕೆ ಯಾವುದೇ ಅವಕಾಶ ಕಾಣುತ್ತಿಲ್ಲ; ಆದರೆ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಪ್ರೌಢಶಾಲಾ ಶಿಕ್ಷಕರ ಪ್ರತಿಭಟನೆ

ಶೃಂಗೇರಿ : ಈ ತಾಲ್ಲೂಕಿನ ಎಲ್ಲಾ ಪ್ರೌಢ ಶಾಲೆಗಳ ಸಹ ಶಿಕ್ಷಕರು, ಪದವೀಧರ ಮುಖ್ಯೋಪಾಧ್ಯಾಯರು ಮತ್ತು ಶಾಲಾ ತನಿಖಾಧಿಕಾರಿಗಳು ವೇತನ ತಾರತಮ್ಯ ಮತ್ತಿತರ ಕುಂದುಕೊರತೆಗಳನ್ನು ಸರ್ಕಾರ ಬಗೆಹರಿಸದಿರುವುದನ್ನು ಪ್ರತಿಭಟಿಸಿ ಸೆ. 26ರಂದು ಕಪ್ಪು ಪಟ್ಟಿ ಧರಿಸಿ ಮೆರವಣಿಗೆ ನಡೆಸಿ ತಹಸೀಲ್ದಾರರ ಮೂಲಕ ಮನವಿ ಸಲ್ಲಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀನಬಂಧು ಅಚ್ಚುಕೂಟ, ಕೊಪ್ಪ